**C. C. No. 2/2024** **PW - 1**

ಪ್ರಮಾಣೀಕರಿಸಲಾದ ದಿನಾಂಕಃ- **09.09.2025.**

ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ. ಬಿ. ಎ ವಕೀಲರಿಂದಃ-

ನಗದು ಹಣ ಕೊಟ್ಟಿದ್ದ ಬಗ್ಗೆ ಯಾವುದೇ audit ದಾಖಲೆಯಲ್ಲಿ ನಾನು ತೋರಿಸಿರುವುದಿಲ್ಲ. ನನಗೆ 2 – 3 ಬ್ಯಾಂಕ್ ಗಳಲ್ಲಿ ಖಾತೆ ಇದೆ. ಬ್ಯಾಂಕ್ ವ್ಯವಹಾರಗಳು ಗೊತ್ತಿದೆ. ಬ್ಯಾಂಕ್ ಖಾತೆಗಳ ಮೂಲಕ ಕೊಡಲು ತೊಂದರೆ ಇರಲಿಲ್ಲ, ಆದರೆ ನಗದು ನನ್ನ ಬಳಿ ಇತ್ತು. ಬ್ಯಾಂಕ್ ಹೋಗಿ ನಗದು ಹಣ ಜಮಾ ಮಾಡಲು ತೊಂದರೆ ಇತ್ತು, ನನಗೆ ಅನಾರೋಗ್ಯವಾಗಿತ್ತು. ನನಗೆ ಹೆಂಡತಿ ಇದ್ದಾಳೆ. ಆಳುಗಳ ಕೂಲಿ ಖರ್ಚು ಮತ್ತು ಗೊಬ್ಬರಕ್ಕೆ ನಗದು ಹಣ ಇಟ್ಟುಕೊಂಡಿದ್ದೆ. ನಗದು ಹಣ ನನ್ನಲ್ಲಿ ಆರೋಪಿಗೆ ಕೊಡಲು ಇರಲಿಲ್ಲ ಎಂದರೆ ಸರಿಯಲ್ಲ. 4 ವರೆ ಲಕ್ಷ ಹಣ ನಗದು ಕೊಡಲು ನಾನು ಶಕ್ತನಲ್ಲ, ಆರೋಪಿಗೆ ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿದಂತೆ ನಾನು ಆರೋಪಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ